ನಿವೇಶನ ಮತ್ತು ವಸತಿರಹಿತರ ಸರ್ವೆ ಮಾಡುವ ಬಗ್ಗೆ.

115(2015); ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)

ಅ) ಮೈಸೂರು ನಗರ ವ್ಯಾಪ್ತಿಯಲ್ಲಿ ವಸತಿರಹಿತರ ಮತ್ತು ನಿವೇಶನರಹಿತರ ಸಮೀಕ್ಷೆ ನಡೆಸಲಾಗಿದೆಯೇ (ಕ್ಷೇತ್ರವಾರು ವಿವರ ನೀಡುವುದು);

ಆ) ಮೈಸೂರು ನಗರ ವ್ಯಾಪ್ತಿಯಲ್ಲಿ ಬಾಡಿಗೆದಾರರ ಸಮೀಕ್ಷೆ ನಡೆಸಲಾಗಿದೆಯೇ (ಕ್ಷೇತ್ರವಾರು ವಿವರ ನೀಡುವುದು)?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ಇಲ್ಲ

ಆ) ಹೌದು

2011–12ನೇ ಸಾಲಿನಲ್ಲಿ ಮೈಸೂರು ಮಹಾನಗರ ಪಾಲಿಕೆಯವರು ಬಾಡಿಗೆದಾರರ ಸಮೀಕ್ಷೆ ನಡೆಸಿದ್ದು, ಕ್ಷೇತ್ರವಾರು ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ಬಾಡಿಗೆದಾರರ ಸಂಖ್ಯೆ
1	ಕೃಷ್ಣರಾಜ ಕ್ಷೇತ್ರ	10961
2	ಚಾಮರಾಜ ಕ್ಷೇತ್ರ	7520
3	ನರಸಿಂಹರಾಜ ಕ್ಷೇತ್ರ	4901
4	ಚಾಮುಂಡೇಶ್ವರಿ ಕ್ಷೇತ್ರ	921
ಒಟ್ಟು		**24303**

ಶ್ರೀ ತನ್ವೀರ್ ಸೇಠ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀಡಿದ್ದಾರೆ. ಈಗಾಗಲೇ ಕೊಟ್ಟಿರುವಂಥ ಮಾಹಿತಿಗಳು ಬೇರೆಯದ್ದಾಗಿದೆಯೆಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ. ಇದರಲ್ಲಿ ವಸತಿ ರಹಿತ ಮತ್ತು ನಿವೇಶನ ರಹಿತರ ಸರ್ವೆ ಮಾಡಬೇಕಾಗಿರುವಂಥದ್ದು, ಸರ್ವೇಕ್ಷಣಾ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿರುವಂಥ ಜವಾಬ್ದಾರಿ ಸ್ಥಳೀಯ ಸಂಸ್ಥೆಗಳದ್ದಾಗಿದೆ. ಅದನ್ನೇ ನಡೆಸಿಲ್ಲವೆಂದು ಹೇಳುತ್ತಿದ್ದಾರೆ. ಇದರ ಜೊತೆಗೆ ಕೇಂದ್ರ ಸರ್ಕಾರದ ರಾಜೀವ್ ಅವಾಸ ಯೋಜನೆ. ಯೋಜನೆ ಇವತ್ತು ನಮ್ಮಲ್ಲಿ ಬರುತ್ತಿದೆ. ಅನೇಕ ವಸತಿ ಯೋಜನೆಗಳು ನಮ್ಮ ರಾಜ್ಯದಲ್ಲಿ ಈಗ ಇರುವಂಥದ್ದರಲ್ಲಿ ಒಂದೊಂದು ಯೋಜನೆಗೆ ಒಂದೊಂದು ಮಾನದಂಡವಿದೆ. ಈ ಎಲ್ಲವೂ ಒಂದಾಗಿ ಸರಿಯಾದ ಕ್ರಮದಲ್ಲಿ ನಾವು ಏನಾದರೂ ಒಂದು ಫಲಕಾರಿಯಾದಂಥ ಯೋಜನೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಏನು ಈ ಬಾಡಿಗೆದಾರರ ಸಮೀಕ್ಷೆ ಮಾಡಿರುವಂಥದ್ದರಲ್ಲಿ ನನ್ನ ಕ್ಷೇತ್ರದ ಗುರಿಯನ್ನೇನು ಇಲ್ಲಿ ಕೊಟ್ಟಿದ್ದಾರೆ ಅಥವಾ ಇಲ್ಲಿ ಆ ಸಂಖ್ಯೆ ಏನೆಂದು ಕೊಟ್ಟಿದ್ದಾರೋ ಅದು ನನ್ನ ಹತ್ತಿರ ಇರುವಂಥ ಮಾಹಿತಿಗೆ ವ್ಯತಿರಿಕ್ತವಾಗಿದೆ. ನನ್ನ ಹತ್ತಿರ ಇರುವಂಥ ಮಾಹಿತಿಯೇ ಬೇರೆಯಾಗಿದೆ. ನನಗೆ ಇವರು ಕೊಟ್ಟಿರುವ ಮಾಹಿತಿಯೇ ಬೇರೆಯಾಗಿದೆ. ಆ ಕಾರಣಗಳಿಂದ ಅಧಿಕಾರಿಗಳಿಗೆ ಬಹಳ ಸ್ಪಷ್ಟವಾದಂಥ ನಿರ್ದೇಶನವನ್ನು ಕೊಡಬೇಕಾಗುತ್ತದೆ. ಇದರ ಜೊತೆಗೆ ಇಡೀ ರಾಜ್ಯದಲ್ಲಿ,,,

ಅಧ್ಯಕ್ಷರು:– ಇಡೀ ರಾಜ್ಯದ್ದು ಬೇಡ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಮೈಸೂರು ನಗರಕ್ಕೆ ಸೀಮಿತವಾಗಿ ಕೇಳಿ.

ಶ್ರೀ ತನ್ವೀರ್ ಸೇಠ್:– ಅದನ್ನೇ ಹೇಳುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಆಶ್ರಯ ಯೋಜನೆಯಲ್ಲಿ 11 ಲಕ್ಷ ಮನೆಗಳನ್ನು ಕಟ್ಟುವಂಥ ಸಂದರ್ಭದಲ್ಲಿ ಅವರಿಗೆ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗಿಲ್ಲ.

ಅಧ್ಯಕ್ಷರು:– ಇಡೀ ರಾಜ್ಯದ್ದು ಈಗ ನೀವು ಕೇಳುವುದು ಬೇಡ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿ.

ಶ್ರೀ ತನ್ವೀರ್ ಸೇಠ್:– ನನ್ನ ಕ್ಷೇತ್ರದಲ್ಲಿ ಅಥವಾ ಮೈಸೂರು ನಗರಕ್ಕೆ ಮನೆಗಳನ್ನು ಕೊಡುವಂಥ ವಿಚಾರದಲ್ಲಿ ಮಾನ್ಯ ಸಚಿವರು ಸ್ಪಷ್ಟವಾದಂಥ ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಸಮೀಕ್ಷೆ ಮಾಡಿಲ್ಲ, ಹೌದು. ಅವರು ಈ ಕೆಲಸವನ್ನು ಸ್ಥಳೀಯ ಸಂಸ್ಥೆಗಳು ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ 2003 ರ ಸಮೀಕ್ಷೆ ಪ್ರಕಾರ ಇಡೀ ರಾಜ್ಯದಲ್ಲಿ 12 ಲಕ್ಷ ಮನೆಗಳನ್ನು ಮತ್ತು 10 ಲಕ್ಷ ನಿವೇಶನಗಳನ್ನು ಕೊಟ್ಟರೆ ಇದು ಮುಗಿಯುತ್ತದೆ ಎಂದಾಗಿದೆ. ಹಿಂದೆ ಯಾವುದೇ ಸರ್ಕಾರಗಳಿರಬಹುದು, ಅದು ಬಿ.ಜೆ.ಪಿ. ಇರಬಹುದು, ಜನತಾ ದಳವಿರಬಹುದು, ಕಾಂಗ್ರೆಸ್ ಪಕ್ಷವಿರಬಹುದು, ಇದುವರೆವಿಗೂ 28 ಲಕ್ಷ ಮನೆಗಳು ಮತ್ತು ನಿವೇಶನಗಳನ್ನು ಒದಗಿಸಿಕೊಟ್ಟಿದ್ದಾರೆ. ಆದರೂ ನಮಗೆ ಮನೆ ಬೇಕು, ಮನೆ ಬೇಕು ಎನ್ನುವ ಕೂಗು ಇದ್ದೇ ಇದೆ. ಇದೆನ್ನೆಲ್ಲವನ್ನು ಮಾಡುವುದಕ್ಕೋಸ್ಕರ ಇವತ್ತಿನ ತಂತ್ರಜ್ಞಾನ ದೇಶದಲ್ಲಿ ಮಾತ್ರವಲ್ಲ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಕೂಡ ಮೇಲಕ್ಕೆ ಹೋಗುತ್ತಿದೆ. ಆ ತಂತ್ರಜ್ಞಾನವನ್ನು ಉಪಯೋಗಿಸಿ ಎಲ್ಲಿ ನಮಗೆ ತಪ್ಪು ಕಾಣುತ್ತಿದೆ, ಎಲ್ಲಿ ನಮ್ಮಲ್ಲಿ ಸಡಲಿಕೆಯಿದೆ, ಯರು ತಪ್ಪು ಮಾಡುತ್ತಿದ್ದಾರೆ, ಇದನ್ನೆಲ್ಲವನ್ನು ನಾವು ಮತ್ತು ಅಧಿಕಾರಿಗಳು ಕುಳಿತು ಚರ್ಚೆ ಮಾಡಿ ಒಂದು ಒಳ್ಳೆಯ ಯೋಜನೆಯನ್ನು ತರಬೇಕೆಂದಿದ್ದೇವೆ. ಮಾನ್ಯ ಶಾಸಕರು ಎಲ್ಲಾ ವಸತಿ ಯೋಜನೆಗಳನ್ನು ಒಟ್ಟಿಗೆ ಮಾಡಿ ಒಳ್ಳೆಯ ಯೋಜನೆ ಮಾಡಿ ಎಂದು ಹೇಳುತ್ತಾರೆ. ಆದರೆ ಆ ರೀತಿಯಾಗುವುದಿಲ್ಲ. ರಾಜೀವ್ ಆವಾಸ್ ಯೋಜನೆ ಇರಬಹುದು, ಇಂದಿರಾ ಅವಾಸ್ ಯೋಜನೆ ಇರಬಹುದು, ರಾಜೀವ್‌ಗಾಂಧಿ ವಸತಿ ಯೋಜನೆ ಇರಬಹುದು, ಹೀಗೆ ಬೇರೆ ಬೇರೆ ವಸತಿ ಯೋಜನೆಗಳ ಕ್ಯಾಟಗರಿಗಳಲ್ಲಿ ಯಾರು ಅರ್ಹರಿರುತ್ತಾರೋ ಅವರಿಗೆ ಮಾತ್ರ ಮನೆಗಳನ್ನು/ನಿವೇಶನಗಳನ್ನು ಕೊಡುವುದಕ್ಕಾಗುತ್ತದೆ. ಈಗ ವಸತಿ

ಸಚಿವಾಲಯದಿಂದ ಒಂದು ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಚಿಂತನೆ ಮಾಡಿದ್ದೇವೆ. ಏನಪ್ಪಾ ಎಂದರೆ ಗ್ರಾಮ ಪಂಚಾಯತಿ ಅಧ್ಯಕ್ಷ ಬರುತ್ತಾನೆ ...

ಅಧ್ಯಕ್ಷರು:– ಇಲ್ಲಿ ಆ ಬಗ್ಗೆ ಪ್ರಶ್ನೆಯೇ ಬರುವುದಿಲ್ಲ, ಈಗ ಅವರು ಕೇಳಿರುವ ಪ್ರಶ್ನೆಗೆ ಉತ್ತರ ಹೇಳಿಯಷ್ಟೆ. ಅವರು ಮೈಸೂರು ನಗರಕ್ಕೆ ಸೀಮಿತವಾಗಿ ಕೇಳಿದ್ದಾರೆ.

ಡಾ॥ ಎಂ.ಹೆಚ್. ಅಂಬರೀಷ್:– ಮೈಸೂರು ನಗರಕ್ಕೆ ಸೀಮಿತವಾಗಿ ಮಾಡಿಕೊಟ್ಟುಬಿಡುತ್ತೇನೆ ಎಂದರೆ ಮುಗಿದುಹೋಗುತ್ತದೆ. ಆದರೆ ಹೊಸ ತಂತ್ರಜ್ಞಾನದ ಬಳಕೆ ಹೇಗೆ ಮಾಡಿಕೊಳ್ಳುತ್ತೇವೆ ಎಂದು ಎಲ್ಲರಿಗೂ ಹೇಳಬೇಕಾಗುತ್ತದೆ.

ಅಧ್ಯಕ್ಷರು:– ಇದನ್ನು ಇಲಾಖೆಗೆ ಸಂಬಂಧಪಟ್ಟಂತೆ ಚರ್ಚೆ ಬಂದಾಗ ಹೇಳಿ. ಈಗ ಪ್ರಶ್ನೋತ್ತರ ವೇಳೆಯ ಕಲಾಪ ನಡೆಯುತ್ತಿರುವುದು.

ಡಾ॥ ಎಂ.ಹೆಚ್. ಅಂಬರೀಷ್:– ಎರಡೇ ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ನಾನು ಯಾವತ್ತೋ ಒಂದು ದಿನ ಬಂದು ಮಾತನಾಡುತ್ತೇನೆ. ಅವಕಾಶ ಕೊಡಿ.

ಅಧ್ಯಕ್ಷರು:– ಆ ರೀತಿ ಹೇಳಬಾರದು. ಯಾವತ್ತೇ ಆಗಲಿ ನಿಮ್ಮ ಕೆಲಸವಿದ್ದಾಗ ಬರಲೇಬೇಕು.

ಡಾ॥ ಎಂ.ಹೆಚ್. ಅಂಬರೀಷ್:– ಆಯಿತು ಅಧ್ಯಕ್ಷರೆ, ಬರುತ್ತಿರುತ್ತೇವೆ. ಈಗ ಗ್ರಾಮ ಪಂಚಾಯತಿ ಅಧ್ಯಕ್ಷರೇ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾ ಬಂದರು. ಕೆಲವರನ್ನು influence ಮೇಲೆ ಆಯ್ಕೆ ಮಾಡಿಬಿಡುತ್ತಾರೆ, ಕೆಲವರನ್ನು political influence ಮೇಲೆ ಆಯ್ಕೆ ಮಾಡಿಬಿಡುತ್ತಾರೆ. ಆದುದರಿಂದ ಈಗ ನಾವು online open ಮಾಡಿಬಿಟ್ಟಿದ್ದೇವೆ. ಯಾರೂ ಬೇಕಾದರೂ open ಮಾಡಬಹುದು, ಯಾರೂ ಬೇಕಾದರೂ online ನಲ್ಲಿ apply ಮಾಡಬಹುದು. ಇದನ್ನೆಲ್ಲವನ್ನೂ ಒಂದು ಕಡೆಗೆ ತಂದು ಯಾರು ಅಧ್ಯಕ್ಷರಿರುತ್ತಾರೋ ಅವರೇ ಆ ಲಿಸ್ಟ್‌ನಲ್ಲಿರುವವರಲ್ಲಿಯೇ select

ಮಾಡಬೇಕು. apply ಮಾಡಿರುವಂಥದ್ದು ಸರಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕು. ಇದರಲ್ಲಿ ತಪ್ಪಿರುವುದನ್ನು delete ಮಾಡುವುದಕ್ಕೆ ಅವಕಾಶವಿರುತ್ತದೆಯೇ ಹೊರತು ಹೊಸದಾಗಿ add ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಈ ರೀತಿ ಮಾಡಿ ಎಲ್ಲರಿಗೂ ಒಳ್ಳೆಯ ರೀತಿಯಲ್ಲಿ justification ಕೊಡಬೇಕು ಎನ್ನುವ ಒಂದು idea ಇಟ್ಟುಕೊಂಡು ಎಷ್ಟು ಮನೆಗಳು/ನಿವೇಶನಗಳು ಬೇಕಾಗಿದೆಯೋ ಅಷ್ಟನ್ನು ಕಟ್ಟಿಸಿಕೊಡಬೇಕು ಎನ್ನುವ ಉದ್ದೇಶದಿಂದ ಆ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಇದರಲ್ಲಿ ಎಲ್ಲವೂ full transparent ಆಗಿರುತ್ತದೆ.

ಹೈದ್ರಾಬಾದ್–ಕರ್ನಾಟಕ ಭಾಗಕ್ಕೆ ಶಿಕ್ಷಕರನ್ನು ನೇಮಿಸುವ ಬಗ್ಗೆ.

116(827); ಶ್ರೀ ಪಾಟೀಲ್ ಬಿ.ಆರ್. (ಆಳಂದ)

ಅ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಬಹುತೇಕ ಶಾಲೆಗಳಲ್ಲಿ ಆಂಗ್ಲ, ವಿಜ್ಞಾನ ಮತ್ತು ಗಣಿತ ಶಿಕ್ಷಕರ ಕೊರತೆ ಕಂಡುಬಂದಿದ್ದು, ಎಷ್ಟು ಹುದ್ದೆಗಳು ಖಾಲಿ ಇವೆ;

ಆ) ಇದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಈ ವಿಷಯಗಳ ಶಿಕ್ಷಕರಿಲ್ಲದೆ ತೊಂದರೆಯಾಗಿ ಮಕ್ಕಳು ಸ್ಪರ್ಧೆಯಲ್ಲಿ ಹಿಂದೆ ಬೀಳುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವರು)

ಅ) ಶಿಕ್ಷಕರ ಖಾಲಿ ಹುದ್ದೆಗಳು:

ಪ್ರಾಥಮಿಕ ಆಂಗ್ಲ–746, ವಿಜ್ಞಾನ–772 ಮತ್ತು ಗಣಿತ–00